ಭೆಂಗಳೂರಿನಲ್ಲಿ ಈಗ ಸ್ವಲ್ಪ ಕಾಲದಿಂದ ಸೌದೆಗೆ ಅಭಾವವಾಗಿರುವುದರಿಂದ fuel plantation ಗಳನ್ನು ಏಳಿಸಿದ್ದೇವೆ.

Sri M. PALANIYAPPAN.—What is the total area brought under plantation in Bangalore District.

Dr. R. NAGAN GOWDA.—It is quite considerable. I want notice for that.

Land grant to landless raiyats of Haleyur.

Q.—625. **Sm. LAKSHMIDEVI RAMANNA** (Hoskote-Anekal).—

Will the Government be pleased to state :—

(*a*) since how many years petitions are being sent from the villagers of Haleyur, Nandagudi hobli, Hoskote taluk, praying for the grant of at least two acres of land per head to landless poor raiyats from the Banjar forest situated in the neighbourhood of the village ;

(*b*) whether the land will be granted to them at least this year and thus provide them with employment and enable them to eke out their living ?

A.—**Dr. R. NAGAN GOWDA** (Minister for Agriculture).—

(*a*) Seven years.

(*b*) Plantations have been raised on the land asked for. Bangalore District is a Maidan area and the percentage of Forest to the total land area of the District is only 14.5 per cent which is very far below the standard of 25 per cent adopted as the National Forest Policy.

It is therefore not possible to release lands from this forest for cultivation.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—(ಬ) ಪ್ರಶ್ನೆಗೆ ಉತ್ತರವಾಗಿ, ನಾವು ಕೇಳಿರುವ ಜಮೀನಿನಲ್ಲಿ ಪ್ಲಾಂಟೇಷನ್ ಬೆಳೆಸಿದೆಯೆಂದು ಹೇಳಿದ್ದೀರಿ. ಅಲ್ಲಿ ಏನೇನು ಗಿಡಗಳನ್ನು ಬೆಳೆಸಿದ್ದೀರಿ ?

Dr. R. NAGAN GOWDA.—Usually in this area, we are growing casuarina plantation and then we have taken to eucalyptus plantation. I cannot say exactly what is on the plot.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಅದರಲ್ಲಿಯಾವ ಗಿಡಗಳನ್ನೂ ಬೆಳೆಸಿಲ್ಲ, ಜಮೀನು ಹಾಗೆಯೇ ಖಾಲಿಯಿದೆ ಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಪ್ಲಾಂಟೇಷನ್ ಬೆಳೆಸದೆ ಇದ್ದರೆ ಆ ಜಮೀನನ್ನು ರೈತರಿಗೆ ಬಿಡಿಸಿ ಕೊಡುತ್ತೀರಾ ?

Dr. R. NAGAN GOWDA.—Sir, it is the policy of Government that we should maintain at least 25 per cent of the land in forest; we do not have that much at all. We have got 14 per cent or 15 per cent and if this plantation or if this area or any part of these forests are given over for cultivation, then it will be very difficult for us to take it back. It is quite a problem for the Government to maintain the forests that they have.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಆ ಜಮೀನಿನಲ್ಲಿ ಗಿಡ ಬೆಳೆಸಿದ್ದರೆ ಪರವಾಯಿಲ್ಲ. ಕಾರೇಗಿಡ, ಮುಳ್ಳು ಗಿಡಗಳೆಲ್ಲಾ ಬೆಳೆದುಕೊಂಡಿವೆ. ಆ ಮುಳ್ಳುಗಿಡಗಳನ್ನು ಇಟ್ಟುಕೊಂಡು forest ಎಂದು ಹೇಳುವುದು ನ್ಯಾಯವೇ?

ಡಾ॥ ಆರ್. ನಾಗನಗೌಡ.—ಕಾಡನ್ನು ಬೆಳೆಸುವ ಪ್ರಯತ್ನದಲ್ಲೇ ಇದ್ದೇವೆ. ಈ ಸಾರಿ ಅಲ್ಲಿ ಏನೂ ಇಲ್ಲದೇ ಇದ್ದರೂ ಬರುವ ವರ್ಷಕ್ಕೆ ಒಂದು ಪ್ಲಾಂಟೇಷನ್ ಬೆಳೆಸುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಫಾರೆಸ್ಟ್ ಇಲಾಖೆಯವರು ಪ್ಲಾಂಟೇಷನ್ನಿಗಾಗಿ ಎಷ್ಟು area ಇರಬೇಕು, ಎಷ್ಟು ಗಿಡಗಳನ್ನು ನೆಡಬೇಕು, ಎಷ್ಟು ಪ್ರದೇಶವನ್ನು develop ಮಾಡಿದೆ ಎಂಬುದನ್ನು ಸರ್ವೆ ಮಾಡಿ ನೋಡಿದ್ದಾರೆಯೇ?

Dr. R. NAGAN GOWDA.—We have got a programme this year. We are dividing Rs. 1,50,000 for plantation and afforestation and as I was saying the other day we are also having the soil conservation work and we expect to get an equal amount or more from the Government of India for doing this plantation work. We expect to do it on a large scale.

ಶ್ರೀ ಎಸ್. ಸಿದ್ದಪ್ಪ.—ಸಂಸ್ಥಾನಕ್ಕೆ ಎಷ್ಟು ಅರಣ್ಯ ಇರಬೇಕೋ ಅಷ್ಟು ಅರಣ್ಯ ಇಲ್ಲದೆ ದೇಶಕ್ಕೆ ಕೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಅವರೇ ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಚಂದನವೇ ಮುಂತಾದ ಅನೇಕ ಅರಣ್ಯದ ಉತ್ಪಾದನಗಳಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳು ಬರುತ್ತಿದ್ದುದೂ. ಈಗ ದಿನೇ ದಿನೇ ಕಾಡುಗಳ ವ್ಯವಸ್ಥೆ ಸರಿಯಾಗಿಲ್ಲದೆ ಬರುವ ಆದಾಯ ಕಡಿಮೆಯಾಗಿರುವುದೂ ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಚಂದನಕ್ಕೆ spike disease ಬಂದಿದೆ.

ಶ್ರೀ ಜೆ. ನಾರಾಯಣಪ್ಪ.—ಕೆಲವು ಕಾಡುಗಳನ್ನು ಪಂಚಾಯಿತಿಯವರು ಸ್ವಂತವಾಗಿ ಅಭಿವೃದ್ಧಿ ಮಾಡುವುದಾದರೆ ಅವರಿಗೆ ಕೊಡುತ್ತೀರಾ ?

ಡಾ॥ ಆರ್. ನಾಗನಗೌಡ.—ಉತ್ತಮವಾದ ರೀತಿಯಲ್ಲಿ ಕಾಡನ್ನು ಬೆಳೆಸುತ್ತೇವೆಂದು ಹೇಳುವುದಾದರೆ ಪಂಚಾಯಿತಿಗೆ ಬಿಟ್ಟುಕೊಡುತ್ತೇವೆ.